# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1571 |
| ಸದಸ್ಯರ ಹೆಸರು | : | ಶ್ರೀ ಮಾನೆ ಶ್ರೀನಿವಾಸ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 24-09-2021 |
| ಉತ್ತರಿಸುವ ಮಾನ್ಯ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2019-20ನೇ ಸಾಲಿನಲ್ಲಿ ತೋಟಗಾರಿಕೆ ಮತ್ತು ಕೃಷಿ ಇಲಾಖೆಗೆ ಸಂಬಂಧಿಸಿದಂತೆ, ರೈತರು ಹವಾಮಾನ ಆಧಾರಿತ ಫಸಲ್ ಬಿಮಾ ಕಂತು ಭರಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.<br>ಕೃಷಿ ಇಲಾಖೆಯ ವತಿಯಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಹಾಗೂ ತೋಟಗಾರಿಕೆ ಇಲಾಖೆಯ ವತಿಯಿಂದ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ..<br>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2019-20ನೇ ಸಾಲಿನಲ್ಲಿ ಸಂದಾಯವಾಗಿರುವ ರೈತರ ವಿಮಾ ಕಂತಿನ ಮೊತ್ತದ ಹಂಗಾಮುವಾರು ವಿವರ ಈ ಕೆಳಕಂಡಂತಿದೆ:<br>(ರೂ.ಕೋಟಿಗಳಲ್ಲಿ)<br><table><tr><th>ವರ್ಷ / ಹಂಗಾಮು</th><th>ರೈತರ ವಿಮಾ ಕಂತು</th></tr><tr><td>2019 ಮುಂಗಾರು</td><td>133.25</td></tr><tr><td>2019-20 ಹಿಂಗಾರು ಮತ್ತು ಬೇಸಿಗೆ</td><td>40.30</td></tr><tr><td>ಒಟ್ಟು</td><td>173.55</td></tr></table><br>ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ 2019-20ನೇ ಸಾಲಿನಲ್ಲಿ ಸಂದಾಯವಾಗಿರುವ ರೈತರ ವಿಮಾ ಕಂತಿನ ಮೊತ್ತದ ಹಂಗಾಮುವಾರು ವಿವರ ಈ ಮುಂದಿನಂತಿದೆ:<br>(ರೂ.ಕೋಟಿಗಳಲ್ಲಿ)<br><table><tr><th>ವರ್ಷ / ಹಂಗಾಮು</th><th>ರೈತರ ವಿಮಾ ಕಂತು</th></tr><tr><td>2019 ಮುಂಗಾರು</td><td>61.35</td></tr><tr><td>2019-20 ಹಿಂಗಾರು ಮತ್ತು ಬೇಸಿಗೆ</td><td>18.40</td></tr><tr><td>ಒಟ್ಟು</td><td>79.75</td></tr></table></td></tr>
</table>

<table>
<tr>
<td>ಆ)</td>
<td>ಕಂದಾಯ ಇಲಾಖೆಯವರು ಮುಂಗಾರಿನಲ್ಲಿ ಬೆಳೆಗಳ ಸರ್ವೆಯನ್ನು ಮಾಡಿಸಿ, ಹಿಂಗಾರಿನಲ್ಲಿ ಸರ್ವೆ ಮಾಡಿಸಬೇಕಾಗಿರುವ ನಿಯಮದ ಕುರಿತು ಸರ್ಕಾರಕ್ಕೆ ಮಾಹಿತಿ ಇದೆಯೇ;</td>
<td>ಇದೆ.<br>ಪ್ರತಿ ವರ್ಷ ಕಂದಾಯ, ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳ ಸಮನ್ವಯದೊಂದಿಗೆ ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳಲ್ಲಿ ಎಲ್ಲಾ ತಾಕುಗಳ ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದ್ದು, ಬೆಳೆ ಸಮೀಕ್ಷೆಯ ವಿವಿಧ ಹಂತಗಳಲ್ಲಿ ಪಾಲಿಸಬೇಕಾದ ನಿಯಮಗಳ ಹಾಗೂ ಮಾರ್ಗಸೂಚಿಗಳ ಕುರಿತು ಸರ್ಕಾರದಿಂದ ಅಗತ್ಯ ಆದೇಶಗಳನ್ನು ಹೊರಡಿಸಲಾಗಿರುತ್ತದೆ.</td>
</tr>
<tr>
<td>ಇ)</td>
<td>ಕಂದಾಯ ಇಲಾಖೆಯವರು ಮುಂಗಾರಿನಲ್ಲಿ ಸರ್ವೆಯನ್ನು ಮಾಡಿ, ಹಿಂಗಾರಿನಲ್ಲಿ ಸರ್ವೆ ಮಾಡದೇ ಇದ್ದುದರಿಂದ ರೈತರ ಖಾತೆಗೆ ವಿಮೆ ಹಣ ಜಮೆ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಬೆಳೆ ಸಮೀಕ್ಷೆಯನ್ನು ಮುಂಗಾರು ಹಾಗೂ ಹಿಂಗಾರಿನ ಎರಡೂ ಹಂಗಾಮಿನಲ್ಲೂ ಕೈಗೊಳ್ಳಲಾಗಿರುತ್ತದೆ.<br><br>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2019-20ನೇ ಸಾಲಿನಲ್ಲಿ ರೈತರಿಗೆ ವಿಮಾ ಸಂಸ್ಥೆಯವರಿಂದ ಒಟ್ಟು ಇತ್ಯರ್ಥಪಡಿಸಿರುವ ಹಂಗಾಮುವಾರು ಬೆಳೆ ವಿಮೆ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತಿದೆ:<br>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ / ಹಂಗಾಮು</th><th>ಒಟ್ಟು ಮೊತ್ತ</th></tr>
<tr><td>2019 ಮುಂಗಾರು</td><td>611.50</td></tr>
<tr><td>2019-20 ಹಿಂಗಾರು ಮತ್ತು ಬೇಸಿಗೆ</td><td>129.12</td></tr>
<tr><td>ಒಟ್ಟು</td><td>740.62</td></tr>
</table>
ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ 2019-20ನೇ ಸಾಲಿನಲ್ಲಿ ಅರ್ಹ ರೈತರಿಗೆ ಸಂಬಂಧಪಟ್ಟ ವಿಮಾ ಸಂಸ್ಥೆಯವರಿಂದ ಒಟ್ಟು ಇತ್ಯರ್ಥಪಡಿಸಿರುವ ಹಂಗಾಮುವಾರು ಬೆಳೆ ವಿಮೆ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತಿದೆ:<br>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ / ಹಂಗಾಮು</th><th>ಒಟ್ಟು ಮೊತ್ತ</th></tr>
<tr><td>2019 ಮುಂಗಾರು</td><td>384.08</td></tr>
<tr><td>2019-20 ಹಿಂಗಾರು ಮತ್ತು ಬೇಸಿಗೆ</td><td>201.32</td></tr>
<tr><td>ಒಟ್ಟು</td><td>585.40</td></tr>
</table>
</td>
</tr>
</table>

| | | |
|---|---|---|
| ಈ) | ಕಂದಾಯ ಇಲಾಖೆಯವರ ನಿರ್ಲಕ್ಷ್ಯದಿಂದ ತೊಂದರೆಗೆ ಒಳಗಾದ ರೈತರಿಗೆ ವಿಮೆ ಹಣ ಜಮೆ ಮಾಡಲು ಸರ್ಕಾರಕ್ಕೆ ಬೇಕಾಗುವ ಕಾಲಾವಕಾಶವೆಷ್ಟು? | **ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ**<br>ಬೆಳೆ ಸಮೀಕ್ಷೆಯನ್ನು ಮುಂಗಾರು ಹಾಗೂ ಹಿಂಗಾರಿನ ಎರಡೂ ಹಂಗಾಮಿನಲ್ಲೂ ಕೈಗೊಳ್ಳಲಾಗಿರುತ್ತದೆ ಹಾಗೂ ಯಾವುದೇ ತೊಂದರೆಗಳು ಕಂಡುಬಂದಿರುವುದಿಲ್ಲ.<br>ರಾಜ್ಯದಲ್ಲಿ ಮುಂಗಾರು 2019 ಹಾಗೂ 2019-20 ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆಯ ದತ್ತಾಂಶವನ್ನು ನೋಂದಣಿಯಾದ ರೈತರ ಪ್ರಸ್ತಾವನೆಗಳ ದತ್ತಾಂಶದೊಂದಿಗೆ ಸಂರಕ್ಷಣೆ ತಂತ್ರಾಂಶದ ಮುಖಾಂತರ ಇಂಟಿಗ್ರೇಟ್ ಮಾಡಲಾಗಿರುತ್ತದೆ. ಕೇಂದ್ರ ಸರ್ಕಾರ ನೀಡಿರುವ ಕೆಲವೊಂದು ವಿನಾಯಿತಿಗಳನ್ನು ಅಳವಡಿಸಿ ತಾಳೆಯಾದ ಪ್ರಸ್ತಾವನೆಗಳಿಗೆ ಹಾಗೂ ಬೆಳೆ ಕಟಾವು ಪ್ರಯೋಗಗಳ ವರದಿಯ ಆಧಾರದ ಮೇಲೆ ಅರ್ಹ ಪ್ರಸ್ತಾವನೆಗಳಿಗೆ ಬೆಳೆ ವಿಮೆ ಪರಿಹಾರವನ್ನು ಸಂರಕ್ಷಣೆ ತಂತ್ರಾಂಶದಲ್ಲಿ **initiate** ಮಾಡಲಾಗಿರುತ್ತದೆ. ಅದರಂತೆ, ಅನುಷ್ಠಾನ ವಿಮಾ ಸಂಸ್ಥೆಯವರು ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>2019-20ನೇ ಸಾಲಿನಿಂದ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವ ಪ್ರಕ್ರಿಯೆಯನ್ನು ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಸಂರಕ್ಷಣೆ ತಂತ್ರಾಂಶದ ಮುಖಾಂತರವೇ ರೈತರ ಖಾತೆಗೆ ನೇರ ನಗದು ವರ್ಗಾವಣೆ (Direct Beneficiary Transfer) ಕೈಗೊಳ್ಳಲಾಗಿದ್ದು, ಈ ವಿಧಾನದಲ್ಲಿ ಅರ್ಹ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವುದರಿಂದ ಪಾರದರ್ಶಕತೆ ಮತ್ತು ನೈಜ ಸಮಯದ ಪಾವತಿಯ ಸ್ಥಿತಿ ದೊರಕುತ್ತದೆ. ಈ ಪ್ರಕ್ರಿಯೆಯಂತೆ ವಿಮಾ ಸಂಸ್ಥೆಯವರು ವಿಮಾ ಪರಿಹಾರವನ್ನು ಇತ್ಯರ್ಥಪಡಿಸುತ್ತಿದ್ದಾರೆ.<br>ರೈತ ಫಲಾನುಭವಿಗಳ ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಲಿಂಕ್ ಆಗದೆ ಇರುವ / ಖಾತೆಗೆ ನಿಗದಿ ಪಡಿಸಿರುವ ಗರಿಷ್ಠ ಮಿತಿ ತಲುಪಿರುವ / ಖಾತೆಯನ್ನು ಬ್ಲಾಕ್ ಮಾಡಿರುವುದು / ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (NPCI) ನಲ್ಲಿ ಆಧಾರ್ ಜೋಡಣೆ ಆಗದಿರುವುದು / ಇನಾಕ್ಟಿವ್ ಆಧಾರ್ – ಈ ಎಲ್ಲಾ ಕಾರಣಗಳಿಂದಾಗಿ ವಿಮೆ ಕಂಪನಿಗಳು ರೈತರಿಗೆ ಬೆಳೆ ವಿಮೆ ಪಾವತಿಸಲು ಸಾಧ್ಯವಾಗುತ್ತಿಲ್ಲ. ಈ ಕುರಿತು ರೈತರಿಗೆ ಅವರ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಣೆ ಮಾಡಲು ಹಾಗೂ ಆಧಾರ್ ವಿವರಗಳನ್ನು ಇಂದೀಕರಿಸುವಂತೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ.<br>ಸದರಿ ಸಮಸ್ಯೆಗಳು ಬಗೆಹರಿಯುತ್ತಿದ್ದಂತೆ, ಆ ಕೂಡಲೇ ಬ್ಯಾಂಕ್ ರವರ ಸಹಯೋಗದಿಂದ ಹಾಗೂ ರೈತ ಫಲಾನುಭವಿಗಳೊಂದಿಗೆ ಸಂವಹನ ಸಾಧಿಸಿ, ವಿಮಾ ಸಂಸ್ಥೆಯವರು ಬಾಕಿ ಮೊತ್ತವನ್ನು ಇತ್ಯರ್ಥಪಡಿಸುತ್ತಿದ್ದಾರೆ. |

| | | |
|---|---|---|
| | | **ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ** ರಾಜ್ಯ ಸರ್ಕಾರವು 2019-20 ರ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಸಂಬಂಧಿಸಿದಂತೆ ನಡೆಸಲಾದ ಬೆಳೆ ಸಮೀಕ್ಷೆ ಮಾಹಿತಿಯನ್ನು ಮರುವಿನ್ಯಾಸಗೊಳಿಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಆಯಾ ಹಂಗಾಮುಗಳಲ್ಲಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಬೆಳೆ ಹೊಂದಾಣಿಕೆ ಮಾಡಲಾಗಿರುತ್ತದೆ.<br><br>ಫಲಾನುಭವಿಗಳ ಖಾತೆಗೆ ಆಧಾರ್ ಜೋಡಣೆ ಆಗದಿರುವ ಮತ್ತು ಬ್ಯಾಂಕ್ ಸಂಬಂಧಿತ ಕಾರಣಗಳಿಂದ ವಾಪಸ್ಸಾಗಿರುವ ವಿಮಾ ಪರಿಹಾರವನ್ನು ಸಂಬಂಧಪಟ್ಟ ವಿಮಾ ಕಂಪನಿಗಳ ವತಿಯಿಂದ ಪಾವತಿಸುವ ಕಾರ್ಯ ಪ್ರಗತಿಯಲ್ಲಿದೆ. |

**ಸಂಖ್ಯೆ: ಕೃಇ/126/ಕೃಕೈಉ/2021**

(ಬಿ.ಸಿ. ಪಾಟೀಲ್)

**ಕೃಷಿ ಸಚಿವರು**